ಭತ್ತದ ಮೇಲೆ ಮಾರಾಟ ತೆರಿಗೆ

1936. ಶ್ರೀ ಎ.ಎಂ. ಹಿಂಡಸಗೇರಿ (ಹುಬ್ಬಳ್ಳಿ ನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಂಡಕ್ಕಿ ಮತ್ತು ಅವಲಕ್ಕಿಗಳ ತಯಾರಿಸುವಿಕೆಗಾಗಿ ಖರೀದಿಸುವ ಭತ್ತಕ್ಕೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಲಾಗುತ್ತಿದೆಯೆ? ಹಾಗಿದ್ದಲ್ಲಿ, ಯಾವಾಗಿನಿಂದ;

ಆ) ಭತ್ತದ ಮೇಲೆ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡಿರುವ ದಿನಾಂಕಕ್ಕಿಂತ ಪೂರ್ವಾವಧಿಯಿಂದ ಈ ವಿನಾಯಿತಿ ವಿಸ್ತರಿಸುವ ಪ್ರಸ್ತಾವನೆಯೇನಾದರೂ ಇದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ಮನೆ ನಿವೇಶನದ ಮಂಜೂರಾತಿಗಾಗಿ ಬಂದ ಅರ್ಜಿಗಳ ಸಂಖ್ಯೆ

1527. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಕುಂದಾಪುರ ತಾಲ್ಲೂಕಿನಲ್ಲಿ 1991-92ರಲ್ಲಿ ನಡೆದ ಜನ ಸಂಪರ್ಕ ಸಭೆಗಳಲ್ಲಿ ಮನೆ/ನಿವೇಶನ ಮಂಜೂರಾತಿ ಕೋರಿ ಬಂದ ಅರ್ಜಿಗಳೆಷ್ಟು? ಗ್ರಾಮವಾರು ವಿಳಾಸ ಸಹಿತ ವಿವರ ನೀಡುವುದು.

ಬಿ) ಇದರಲ್ಲಿ ಮಂಜೂರಾದ ಅರ್ಜಿಗಳು ಎಷ್ಟು (ಗ್ರಾಮವಾರು ವಿಳಾಸ ಸಹಿತ ವಿವರ ನೀಡುವುದು)?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಎ) ಮನೆ/ನಿವೇಶನ ಕೋರಿ 193 ಅರ್ಜಿಗಳು ಬಂದಿದ್ದವು. (ಗ್ರಾಮವಾರು ಪಟ್ಟಿ ಲಗತ್ತಿಸಿದೆ-'ಅ')

ಬಿ) ಒಟ್ಟು 39 ಅರ್ಹ ಮಂದಿಗೆ ಮನೆ/ನಿವೇಶನ ಮಂಜೂರು ಮಾಡಲಾಗಿದೆ. (ಪಟ್ಟಿ ಲಗತ್ತಿಸಿದೆ 'ಆ')